# ಇರುವುದೆಲ್ಲವ ಬಿಟ್ಟು...

ಆ ಕಾಲದಲ್ಲಿ ಮುಪ್ಪಿನ ಸಂಕೇತವಾದ ಬೆಳ್ಳಿಕೂದಲನ್ನು ಪೆಪ್ಪರ್‌ಮೆಂಟಿನ ಆಮಿಷ ಒಡ್ಡಿ ಮಕ್ಕಳಿಂದ ಗುಟ್ಟಾಗಿ ಬೇರು ಸಹಿತ ಕಿತ್ತೊಗೆಸುತ್ತಿದ್ದವರು ಒಂದೆಡೆಯಾದರೆ, ಕಿತ್ತರೆ ದ್ವಿಗುಣಗೊಳ್ಳುತ್ತದೆಂಬ ನಂಬಿಕೆಗೆ ಜೋತು ಬಿದ್ದವರು ಕಾಡಿಗೆಯನ್ನೋ ಮಸಿಯನ್ನೋ ಬಳಿದು ತಾತ್ಕಾಲಿಕ ಕಪ್ಪಾಗಿಸುವ ತಂತ್ರಗಾರಿಕೆಗೆ ಮೊರೆಹೋಗುತ್ತಿದ್ದರು. ಇನ್ನು ಕೆಲವರು ಅತೀ ಬುದ್ಧಿವಂತರಿಗೆ ಮಾತ್ರ ಅಕಾಲ ನೆರೆಯಾಗುವುದು ಎಂದು ಬೀಗುತ್ತಿದ್ದರು. ಆದರೆ, ಇಂದು?

■ ಲತಾ ಹೆಗಡೆ
ಕಲೆ: ಸಂತೋಷ್ ಸಸಿಹಿತ್ಲು

ಅಬ್ಬಾ! ಅಂತೂ ಇಂತೂ ಒಣ ಹುಲ್ಲಂತಿರೋ ನಿಸ್ತೇಜ ಕೂದಲಿಗೆ ಡೈ ಬಳಿದದ್ದಾಯ್ತು, ಅದೂ ಅಂತಿಂಥಾ ಡೈ ಅಲ್ಲ... ಟೀವಿ ನೋಡೋಕೆ ಕೂತಾಗಲೆಲ್ಲ ರೇಷ್ಮೆ ಹೊಳಪಿನ ದಟ್ಟ ಕಪ್ಪುಗೂದಲನ್ನು ವಿವಿಧ ಕೋನದಲ್ಲಿ ತೋರಿಸುತ್ತಲೇ 'ನಾನೂ ಅದನ್ನೇ ಬಳ್ಕೊಳ್ಳೋದು' ಅಂತ ಮೋಹಿನಿಯಂತಿರೋ ವಿಶ್ವಸುಂದರಿ ಐಶ್ವರ್ಯಾ ರೈ ಪದೇಪದೇ ಉಲಿದು ಘಂಟಾಘೋಷವಾಗಿಸಿದ್ದಕ್ಕೇ ಅಲ್ಲವೇ ನಾನು ಕನ್ವಿನ್ಸ್ ಆದದ್ದು, ಅಗ್ಗದಿಂದ ದುಬಾರಿಗೆ ಶಿಫ್ಟ್ ಆದದ್ದು.

ಇಂಟರ್‌ನ್ಯಾಷನಲ್ ಬ್ರ್ಯಾಂಡಿನ ದುಬಾರಿ ಹೇರ್ ಡೈ ಬೇರೆ, ಬರೀ ಇಪ್ಪತ್ತೇ ನಿಮಿಷ ಸಾಕಂತೆ... ತಿಂಗಳಾದ್ರೂ ಬಳ್ಕೊಂಡಿದ್ದು ಹೋಗಲ್ವಂತೆ! ನಾನೂ ಅವಳಂತೇ ನುಣುಪಾದ ಕಪ್ಪು ಕೂದಲ ಒಡತಿಯಾಗಿ ಮಿಂಚೋಕೆ ಇನ್ನ್ಯಾವ ಅಡ್ಡಿನೂ ಇಲ್ಲ. ಇಲ್ಲಿ ದಟ್ಟ ಪದ ಬೇಡ ಬಿಡಿ, ಮತ್ಯಾಕೆ ಈ ದರ್ದು ಅಂತಿದ್ದೀರಾ? ಉಳಿದಿರೋ ನಾಲ್ಕೇ ನಾಲ್ಕು ಕೂದಲನ್ನ ಕಪ್ಪಾಗಿಸಬಾರ್ದು ಅಂತ ಎಲ್ಲಾದ್ರೂ ರೂಲ್ಸಿದ್ಯೇ? ಆನಂತರದಲ್ಲಿ ಹತ್ತೇಕೆ, ಇಪ್ಪತ್ತು ವರ್ಷ ಚಿಕ್ಕವಳಾಗಿ ಕೋರೈಸೋ ಮಧುರ ಅನುಭೂತಿ ವರ್ಣನಾತೀತ ಅಂಬೋದು ಸ್ವಾನುಭವಕ್ಕೆ ಬಂದದ್ದಕ್ಕೇ ಅಲ್ವೇ ಮತ್ತೂ ತುಟ್ಟಿಯ ಡೈಗೆ ಮೊರೆಹೋದದ್ದು.

ನೋಡಿ, ಡೈ ಮಾಡ್ಕೊಳ್ಳೋ ಸಮಾನವಯಸ್ಕ, ಮನಸ್ಕರೆಲ್ಲರದ್ದೂ ಇದೇ ಅನುಭವ, ಅಭಿಪ್ರಾಯ ಅಂತ ಎಲ್ಲರ ಪರವಾಗಿ ನಿಖರತೇಲಿ ಹೇಳಬಲ್ಲೆ. ಒಂದ್ವೇಳೆ ಹಂಗಲ್ಲ ಅಂತಾಗಿದ್ರೆ ಕಳಿತ ಮುಖದವರು, ಅರ್ಧ ಚಂದ್ರಾಕೃತಿಯ ತಲೆಗೂದಲಿನವರು, ಅಲ್ಲಲ್ಲಿ ತಲೆಬುರುಡೆ ಇಣುಕುವ ವಿರಳಗೂದಲಿನ ನನ್ನಂಥವರು, ಮತ್ಯಾರ್ಯಾರೋ ಬಣ್ಣದ ಗೋಜಿಗೆ ಹೋಗುತ್ತಿದ್ದರೆ? ಬಿಡಿ, ಮೂವತ್ತಕ್ಕೇ ಕೂದಲಷ್ಟೇ ಅಲ್ಲದೆ ಎಲ್ಲವೂ ಸತ್ವ ಕಳೆದುಕೊಂಡು ಕಳಾಹೀನವಾಗುವ ಹೈಟೆಕ್ ಕಾಲವಿದು. ಕಾರಣ ಕೇಳ್ತಿದ್ದೀರಾ... ಸ್ವಯಂಕೃತ ಅಪರಾಧ ಎನ್ನಬಹುದಷ್ಟೇ.

ಇನ್ನು ವಿಷಯಕ್ಕೆ ಬರೋಣ... ಬಣ್ಣ ಬಳಿದುಕೊಳ್ಳೋದು ಹೇಳಿದಷ್ಟು ಸುಲಭವಲ್ಲ, ಅದಕ್ಕೆ ಪೂರ್ವತಯಾರಿ ಕಡ್ಡಾಯ. ಅದೇ... ತಲೆಯಲ್ಲಿ ಎಣ್ಣೆಯಂಶ ಇರಬಾರದು, ತಲೆ ಸ್ನಾನ ಮಾಡಿರಬೇಕು, ಬ್ರಶ್ಶು, ಗ್ಲೌಸು... ಇತ್ಯಾದಿ ಇತ್ಯಾದಿ ನಿಯಮಗಳನ್ನಂತೂ ಪಾಲಿಸಲೇಬೇಕು. ಅವಸರಕ್ಕೆ ನಿಯಮ ಪಾಲಿಸದೇ ಹಚ್ಕೊಂಡ್ರೆ ಬಣ್ಣ ಬಳಿದ ಫಲಿತಾಂಶ ಹೊಳೇಲಿ ಹುಣಿಸೇಹಣ್ಣು ಹಿಂಡಿದಂತೆ! ಸಾಲದ್ದಕ್ಕೆ ಧರಿಸಿರೋ ಮಾಸಲು ನೈಟಿ ಕಲೆಯಾಗ್ಬಾರ್ದು ಅಂತ ಅದಕ್ಕಿಂತಲೂ ಮಾಸಿದ ಟವಲ್ಲಿಂದ ಸ್ವಸನ್ಮಾನಿಸಿಕೊಂಡು ಕಿವಿಯೋಲೆ, ಮಂಗಳಸೂತ್ರ, ಸರಗಳನ್ನು ತೆಗೆದಿಟ್ಟು ಕೈಗಳಿಗೆ ಗ್ಲೌಸು ಧರಿಸಿ ಬಳ್ಕೊಳ್ಳೋ ಕಾರ್ಯಕ್ರಮಕ್ಕೆ ಶಿಸ್ತಾಗಿ ಓನಾಮ ಹಾಡ್ಬೇಕು. ಅದರಲ್ಲೂ ಮದುವೆ ಮಾಸ ಬಂದ್ರಂತೂ ಮುಗೀತು, ತಲೆಯಿಂದ ಕಾಲಿನವರೆಗೂ ಮುತುವರ್ಜಿ ವಹಿಸಲೇಬೇಕಾದ ಸ್ಥಿತಿ. ಮತ್ತೆ ಬಣ್ಣ ಬಳಿದ ಅವತಾರದಲ್ಲಿ ಅಕ್ಕಪಕ್ಕದವ್ರ ಮುಂದಂತೂ ಕಾಣಿಸ್ಕೊಳ್ಳೋ ಸೀನೇ ಇಲ್ಲ. ಗುಟ್ಟು ಯಾಕೆ ಅಂತಿದ್ದೀರಾ... ಕೆಲವೊಂದು ಸೂಕ್ಷ್ಮ ಇರುತ್ತೆ, ಹೇಳೋಕ್ಕಾಗಲ್ಲ.

ಈ ಮುತುವರ್ಜಿ ವಹಿಸೋ ಪರಿಸ್ಥಿತೀನ ಸುಸ್ಥಿತಿ ಅಥವಾ ದುಸ್ಥಿತಿ ಅಂತ್ಲೂ ಹೇಳಬಹುದು. ಈ ನೆಪದಲ್ಲಾದ್ರೂ ಒಡ್ಡೊಡ್ಡಾಗಿರೋ

